ಓ.ಎಸ್. ನಂ.200/2013

ಡಿ.ಡಬ್ಲ್ಯು-1

ಸಾಕ್ಷಿಯನ್ನು ಇಂದು ದಿನಾಂಕಃ 18.01.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**ಪಾಟೀ ಸವಾಲು ವಾದಿ ಪರ ಶ್ರೀ ಎಸ್.ಎ.ಪಿ. ವಕೀಲರಿಂದ**

ನನ್ನ ಸಹೋದರ ಬಾಬು, ಅವನ ಹೆಂಡತಿ ಮತ್ತು ಅವನ ಮಗ ಸ್ವಂತ ದುಡಿಮೆಯಿಂದ ಎಲ್ಲೆಲ್ಲಿ ಆಸ್ತಿ ತೆಗೆದುಕೊಂಡಿದ್ದಾರೆ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ನನ್ನ ತಾಯಿಯು ಎಲ್ಲಾ ಹಿರಿತನ ಮಾಡುತ್ತಿದ್ದರು ಅವರೇ ನನ್ನ ಸಹೋದರ ಅವನ ಹೆಂಡತಿ, ಮತ್ತು ಮಗನ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ. ಆಸ್ತಿ ಎಲ್ಲೆಲ್ಲಿ ತೆಗೆದುಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುತ್ತದೆ, ಮಹಾರಾಷ್ಟ್ರ ರಾಜ್ಯದ ಉಮರ್ಗಾ ತಾಲೂಕ ಉಸ್ಮಾನಬಾದ ಜಿಲ್ಲೆಯ ಹೋಳಿ ಗ್ರಾಮ, ಪೇಟಸಾಲಗಿ ಗ್ರಾಮದಲ್ಲಿ 10 ಎಕರೆ ಜಮೀನನ್ನು ಖರೀದಿ ಹಿಡಿದಿರುತ್ತದೆ. ಉಮರ್ಗಾದ ಮುಳಜ ರಸ್ತೆಯ ಪಕ್ಕದಲ್ಲಿ 3 ಎಕರೆ ಜಮೀನು, ಉಮರ್ಗಾದಲ್ಲಿ ಒಂದು ಮನೆ ಕಟ್ಟಿರುತ್ತದೆ. ಮತ್ತು ಒಂದು ಸರಾಯಿ ಅಂಗಡಿಯ ಪರವಾನಿಗೆಯನ್ನು ತೆಗೆಸಿ ನನ್ನ ತಾಯಿ ಕೊಟ್ಟಿರುತ್ತಾಳೆ. ಯಾವ ಆಸ್ತಿಯನ್ನು ಯಾರ ಯಾರ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾರೆ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಉಮರ್ಗಾದಲ್ಲಿರುವ ಆಸ್ತಿಯನ್ನು ನನ್ನ ಸಹೋದರ ಬಾಬುನ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾರೆ. ಪೇಟಸಾಲಗಿ ಮತ್ತು ಹೋಳಿ ಗ್ರಾಮದಲ್ಲಿರುವ ಆಸ್ತಿಯನ್ನು ಯಾರ ಹೆಸರಿನಲ್ಲಿ ಖರೀದಿ ಹಿಡಿದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಸಹೋದರನ ಹೆಸರಿನಲ್ಲಿ ಖರೀದಿ ಹಿಡಿದಿರುತ್ತದೆ ನಂತರ ಅವನ ಹೆಂಡತಿ ಮತ್ತು ಮಗನ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಪೇಟಸಾಲ, ಉಮರ್ಗಾ ಮತ್ತು ಹೋಳಿ ಗ್ರಾಮದಲ್ಲಿರುವ ಆಸ್ತಿಯನ್ನು ಯಾರಿಂದ ಮತ್ತು ಎಷ್ಟಕ್ಕೆ ಖರೀದಿ ಮಾಡಿರುತ್ತಾರೆ ಎಂಧರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನನ್ನ ತಾಯಿ ಖರೀದಿ ಹಿಡಿದಿರುತ್ತಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆ ಸಲ್ಲಿಸುವ ಕಾಲಕ್ಕೆ ಯಾವ ಯಾವ ಆಸ್ತಿಗಳು ಇದ್ದವು ಎಂದು ಹೇಳಿ ಬರೆಸಿರುತ್ತೇನೆ, ಅವುಗಳನ್ನು ಸಲ್ಲಿಸಿರುತ್ತೇನೆ, ಅವು ಯಾವು ಯಾವು ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಕಿಣ್ಣಿ ಸುಲ್ತಾನಲ್ಲಿ ಬೆಳೆದ ಬೆಳೆಗಳನ್ನು ನಾವೇ ಉಪಯೋಗಿಸುತ್ತೇವೆ, ಕೇವಲ ಬಾಬುಗೆ ಉಣ್ಣಲು ತಿನ್ನಲು ಕೊಡುತ್ತೇವೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಮನೆಯ ಉಪಯೋಗಕ್ಕೆ ನಾನೇ ಕಾರಿನಲ್ಲಿತೆಗೆದುಕೊಂಡು ಹೋಗಿ ಕೊಡುತ್ತೇನೆ, ಆದರೆ ಇಲ್ಲಿ ಬೆಳೆದಿರುವು

ಎಲ್ಲಾ ಬೆಳೆಗಳನ್ನು ನನ್ನ ಸಹೋದರನೇ ಲಾರಿಯನ್ನು ತುಂಬಿಕೊಂಡು ಹೋಗಿ ಮಾರಾಟ ಮಾಡುತ್ತಾನೆ ಎಂದು ನುಡಿಯುತ್ತಾರೆ. ಯಾವ ಲಾರಿಯಲ್ಲಿ ಮಾಲನ್ನು ತೆಗೆದುಕೊಂಡು ಹೋಗುತ್ತಿದ್ದರು ಮತ್ತು ಅದರ ಸಂಖ್ಯೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು, ನಮ್ಮ ತಾಯಿಯೇ ಒಂದು ಲಾರಿಯನ್ನು ಕೊಡಿಸಿದ್ದಳು, ಅದರ ಸಂಖ್ಯೆ ಎಪಿಎಂ.164 ಇರುತ್ತದೆ. ಸಾಕ್ಷಿ ಮುಂದುವರೆದು ಸದರಿ ಲಾರಿಯನ್ನು ಸಹ ನನ್ನ ಸಹೋದರನೇ ಮಾರಿ ತಿಂದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಲಾರಿಯನ್ನು ಯಾವಾಗ ಮಾರಿದರು ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು, ಈಗ ಹೇಳಲು ಬರುವುದಿಲ್ಲ ಮುಂದೆ ನೋಡಿಕೊಂಡು ಬಂದು ಹೇಳುತ್ತೇನೆ ಎಂದು ಹೇಳುತ್ತಾರೆ.

ಹೋಳಿ ಗ್ರಾಮ ಮತ್ತು ಪೇಟಸಾಲಗಿ ಮತ್ತು ಉಮರ್ಗಾದಲ್ಲಿ ಹಿಡಿದಿರುವ ಎಲ್ಲಾ ಆಸ್ತಿಗಳು ನನ್ನ ಸಹೋದರ ತನ್ನ ಸ್ವಂತ ದುಡಿಮೆಯಿಂದ ಖರೀದಿ ಹಿಡಿದಿರುತ್ತಾನೆ ಅದಕ್ಕೆ ನಾವು ಯಾವುದೇ ರೀತಿಯಾದ ಧನಸಹಾಯವನ್ನು ಮಾಡಿರುವುದಿಲ್ಲ, ಅವು ನಮಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ ಅಲ್ಲ. ಕಿಣ್ಣಿ ಸುಲ್ತಾನ ಗ್ರಾಮದಲ್ಲಿರುವ ಆಸ್ತಿಯನ್ನು ಕೊಡಬಾರದೆನ್ನುವ ಉದ್ದೇಶದಿಂದ ಸದರಿ ಹೋಳಿ ಮತ್ತು ಪೇಟಸಾಲಗಿ ಉಮರ್ಗಾದಲ್ಲಿರುವ ಆಸ್ತಿಯಲ್ಲಿ ನನ್ನ ಪಾಲು ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.